# 9ನೇ ತರಗತಿ ಅರ್ಧವಾರ್ಷಿಕ ಪರೀಕ್ಷೆ 2019

ಸಮಯ : 3.00 ಗಂಟೆ | ವಿಷಯ: **ಪ್ರಥಮ ಭಾಷೆ ಕನ್ನಡ** | ಗರಿಷ್ಠ ಅಂಕಗಳು : 90

---

**I ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **5x1=5**

1) ತೃತೀಯ ವಿಭಕ್ತಿಯ ಕಾರಕಾರ್ಥ

ಎ) ಕರ್ಮಾರ್ಥ ಬಿ) ಕರಣಾರ್ಥ ಸಿ) ಸಂಪ್ರದಾನ ಡಿ) ಅಪಾದಾನ

2) 'ವಿದ್ಯಾಭ್ಯಾಸ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

ಎ) ಸವರ್ಣದೀರ್ಘ ಬಿ) ಗುಣ ಸಿ) ವೃದ್ಧಿ ಡಿ) ಯಣ್

4) 'ತಲೆನೋವು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

ಎ) ದ್ವಿಗು ಬಿ) ಕರ್ಮಧಾರೆಯ ಸಿ) ತತ್ಪುರುಷ ಡಿ) ದ್ವಂದ್ವ

5) 'ಬಣ್ಣ ಬಣ್ಣ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

ಎ) ಜೋಡುನುಡಿ ಬಿ) ಅನುಕರಣಾವ್ಯಯ ಸಿ) ದ್ವಿರುಕ್ತಿ ಡಿ) ಪ್ರತಿಧ್ವನಿ ಶಬ್ದ

3) ಕನ್ನಡ ವರ್ಣಮಾಲೆಯಲ್ಲಿನ ಮಹಾಪ್ರಾಣಾಕ್ಷರ ಸಂಖ್ಯೆ a) 7 b) 6 c) 10 d) 13.

**II ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿಹೊಂದುವ ಉತ್ತರವನ್ನು ಬರೆಯಿರಿ.** **3x1=3**

6) ಪೊಗಳು : ತೆಗಳು : : ಕಾರ್ಮುಗಿಲ್ : ________________

7) ಸೊದೆ : ಸುಧೆ : : ಬಿನ್ನಹ : ________________________

8) ಸುಂದರ : ಅನುಸ್ವಾರ : : ದುಃಖ : ________________

**III ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7x1=7**

9) ಕನ್ನಡ ಮೌಲ್ವಿ ಹಿಡಿದಿದ್ದ ಕನ್ನಡ ಪುಸ್ತಕ ಯಾವುದು?

10) ಜಯಪುರದಲ್ಲಿನ ಖಗೋಲ ವೀಕ್ಷಣಾಲಯದ ಹೆಸರೇನು?

11) ಲೇಖಕ ಕಾರಂತರಿಗಿದ್ದ ಹಂಬಲವೇನು?

12) ಬುಕ್ಕರಾಯನ ರಾಜ್ಯಭಾರದ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು?

13) ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿದ್ದವು?

14) ಮಾರಿದತ್ತನ ಬಳಿಯಿದ್ದ ತಳಾರನ ಹೆಸರೇನು?

15) ರಂಜಾನ್ ಹಬ್ಬದ ಸಡಗರವು ಯಾವಾಗ ಶುರುವಾಗುತ್ತದೆ?

**IV ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **7x2=14**

16) ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲಾ ಆಹ್ವಾನಿಸಿದನು?

17) ರಾಧಾಕೃಷ್ಣನ್ ಅವರ ವೇಷಭೂಷಣಗಳ ಬಗ್ಗೆ ಬರೆಯಿರಿ.

18) ಕಾರಂತರ ಮೊದಲ ಅಂಬೇರ ಭೇಟಿಗೂ ಇತ್ತೀಚಿನ ಭೇಟಿಗೂ ಯಾವ ವ್ಯತ್ಯಾಸವಿತ್ತು?

19) ಪಾರಿವಾಳಗಳ ಆನಂದಕ್ಕೆ ಕಾರಣವೇನು?

20) ಪಂಢರಿಬಾಯಿಯವರು ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವಾದ ಸನ್ನಿವೇಶವನ್ನು ವಿವರಿಸಿ.

21) ರಂಗರಾವ್ ಅವರು ಮಗಳ ಹೆಸರನ್ನು ಪಂಢರಿಬಾಯಿ ಎಂದು ಬದಲಾಯಿಸಲು ಕಾರಣವೇನು?

22) ಬಸವಕೇಂದ್ರದವರು ನಾಗರಪಂಚಮಿಯ ದಿನ ಮೈಕಿನಲ್ಲಿ ಏನೆಂದು ಹೇಳಿ ಜಾಗೃತಿ ಮೂಡಿಸುತ್ತಿದ್ದರು?

**V ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2x3=6**

23) ಗೊರೂರು ರಾಮಸ್ವಾಮಿ ಅಯ್ಯಂಗಾರ್

24) ಜನ್ನ

**VI ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ.** 1x3=3

25) ನಿಂದು ನರಪತಿ ತಳಾರಂ
ಗೆಂದಂ ನೀನ್ ಬರಿಸು ಮನುಜಯುಗಮುಂ ಮುನ್ನಂ

**VII ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ, ಬರೆದು, ಸಮನ್ವಯಗೊಳಿಸಿ** 1x3=3

26) "ಬಾನಿನಲ್ಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು"

**VIII ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** 1x3=3

27) ತುಂಬಿದ ಕೊಡ ತುಳುಕುವುದಿಲ್ಲ.

ಅಥವಾ

ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು?

**IX ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** 6x3=18

28) "ಅವರು ನಿಮ್ಮೆದುರಿಗೆ ಬಂದರೆ ಏನು ಮಾಡುತ್ತೀರಿ"
29) "ಗಂಡಸರೂ ರಂಗುರಾಯರೇ"
30) "ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಂಗಳಿಗೆ ಸೊದೆಯನಿಕ್ಕುವುದು"
31) "ಇದೋ ಮೊದಲು ಮುನ್ನಿಲ್ಲ–ಮುಗಿದುದಂದಿನ ಪಾಡು ಹೊಸತಿಂದು ಹೊಸತು ಹಾಡು"
32) "ಚಂದಿರನೋ ಭಾಸ್ಕರನೋಯೆಂಬಂತೆ"
33) "ಪೂಜೆಯೊಳೆಂದಿನ ಪರಿ ತಪ್ಪೆ ದೇವಿ ತಪ್ಪದೆ ಮಾಣಳ್"

**X ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** 2x4=8

34) ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ನೀಡಿದ ಬೀಳ್ಕೊಡುಗೆಯ ವಿಶೇಷತೆಯನ್ನು ಕುರಿತು ವಿವರಿಸಿ.

ಅಥವಾ

ರಾಧಾಕೃಷ್ಣನ್ ಅವರು ಅಧ್ಯಾಪಕರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ವಿವರಿಸಿ.

35) "ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ" ಎಂಬ ಮಾತನ್ನು ಪಾರಿವಾಳ ಕಥನಕವನದ ಹಿನ್ನೆಲೆಯಲ್ಲಿ ಸಮರ್ಥಿಸಿ.

ಅಥವಾ

ಜೋಡಿ ಪಾರಿವಾಳಗಳ ದುಡುಕಿನ ನಿರ್ಧಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು?

**XI ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** 1x4=4

36) ನವಭಾವ _______________
_____________________
_____________________
ವೀರಧ್ವನಿಯೇರಬೇಕು;

ಅಥವಾ

ಜಾತಿ–ಕುಲ _______________
_______________________
_______________________
_____________ ಗುಡುಗಬೇಕು

**XII ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿ ಸಾರಾಂಶವನ್ನು ಬರೆಯಿರಿ.** 1x4=4

37) ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು
ರಯ್ಯಾ ಮಂಚಿದಿಯೆನೆತೆಲುಗ
ಅಯ್ಯಯ್ಯ ಎಂಚ ಪೊರ್ಲಾಂಡೆ ತುಳುವರು
ಮೈಯುಬ್ಬಿ ಕೇಳಬೇಕಣ್ಣ

**XIII ಕೊಟ್ಟಿರುವ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** 1x4=4 [2+2]

38) ಗೂಡುಕಟ್ಟುವ ಸ್ಥಳ ಆಯ್ಕೆ ಮಾಡುವಾಗ ಗೀಜುಗನ ಹಕ್ಕಿ ಅಸಾಧಾರಣ ಬುದ್ಧಿವಂತಿಕೆ ತೋರಿಸುತ್ತದೆ. ಗೂಡುಕಟ್ಟುವಾಗೆಲ್ಲಾ ಗೀಜುಗ ಕೆಳಗಡೆ ಆಳವಾದ ಬಾವಿಯೋ, ನದಿ ಕೆರೆಗಳ ಕಮರಿಯೋ ಇರುವೆಡೆ ಕಮರಿಗಳ ಕಡೆಗೆ ಬಾಗಿರುವ ಕೊಂಬೆಯ ತುತ್ತ ತುದಿಗೆ ಗೂಡು ಕಟ್ಟುತ್ತದೆ. ಕೆಳಗಡೆ ಆಳವಾದ ಪ್ರಪಾತ ಇರುವುದರಿಂದ ಸ್ವಲ್ಪ ಆಯ ತಪ್ಪಿದರೂ ಕೊಂಬೆ ಸಮೇತ ಪಾತಾಳಕ್ಕೆ ಬೀಳುವ ಭಯದಲ್ಲಿ ಅದು ಗೂಡು ಕಟ್ಟಿರುವ ಬಳುಕುವ ಕೊಂಬೆಯ ಮೇಲೆ ಹೋಗಿ ಮೊಟ್ಟೆಗಳನ್ನಾಗಲೀ ಮರಿಗಳನ್ನಾಗಲೀ ಕದಿಯಲು ಬೆಕ್ಕು, ಹಾವು ಮೊದಲಾದ ಯಾವ ಪ್ರಾಣಿಯೂ ಧೈರ್ಯ ಮಾಡುವುದಿಲ್ಲ.

ಗೀಜುಗನ ಹಕ್ಕಿಗಳಲ್ಲಿ ಗೂಡುಕಟ್ಟುವುವೆಲ್ಲ ಗಂಡು ಹಕ್ಕಿಗಳು. ತಮ್ಮ ಭಾವೀ ಪತ್ನಿಗಾಗಿ ಗೂಡುಗಳನ್ನು ಹೆಣೆಯುತ್ತ, ಹೆಣ್ಣುಹಕ್ಕಿ ಸುಳಿದರೆ ರೆಕ್ಕೆ ಅಲ್ಲಾಡಿಸುತ್ತ ಕರೆಯುತ್ತವೆ. ಯಾವುದಾದರೂ ಹೆಣ್ಣು ಹಕ್ಕಿ ತಮ್ಮ ಗೂಡನ್ನು ಸ್ವೀಕರಿಸಿದರೆ ಗಂಡುಹಕ್ಕಿ ಅದರೊಟ್ಟಿಗೆ ದಾಂಪತ್ಯ ನಡೆಸುತ್ತಾ ಇದ್ದುಬಿಡುವುದಿಲ್ಲ. ಹೆಣ್ಣುಹಕ್ಕಿ ಮೊಟ್ಟೆ ಇಟ್ಟು ಅದರೊಳಗೆ ಕಾವು ಕೊಡಲು ಕೂರುತ್ತಿದ್ದಂತೆಯೇ ಆ ಗೂಡನ್ನು ಅದರ ಜವಾಬ್ದಾರಿಗೇ ವಹಿಸಿ ತಾನು ಬೇರೊಂದು ಗೂಡು ಹೆಣೆಯಲು ಪ್ರಾರಂಭಿಸುತ್ತದೆ.

**ಪ್ರಶ್ನೆಗಳು :** ಅ) ಗಂಡುಗೀಜುಗನ ಕೆಲಸವೇನು?

ಆ) ಗೀಜುಗಗಳು ಗೂಡು ಕಟ್ಟುವಾಗ ತೆಗೆದುಕೊಳ್ಳುವ ಎಚ್ಚರಿಕೆಗಳೇನು?

**XIV ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** 1x4=4

39) ನಿಮ್ಮನ್ನು ಮೊರಾರ್ಜಿದೇಸಾಯಿ ವಸತಿ ಶಾಲೆ, ಪಾಂಡವಪುರದಲ್ಲಿ ವ್ಯಾಸಂಗ ಮಾಡುತ್ತಿರುವ ಸುರಭಿ ಎಂದು ಭಾವಿಸಿಕೊಂಡು, ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ನಿಮ್ಮ ತಾಯಿಗೆ ಪತ್ರ ಬರೆಯಿರಿ.

**ಅಥವಾ**

ನಿಮ್ಮ ಹಳ್ಳಿಯ/ಬಡಾವಣೆಯಲ್ಲಿ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವಂತೆ ಕೋರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಒಂದು ಮನವಿ ಪತ್ರ ಬರೆಯಿರಿ.

**XV ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** 1x4=4

40) ನೆರೆ ಹಾವಳಿ ಹಾಗೂ ಪರಿಹಾರ ಕಾರ್ಯಗಳು

**ಅಥವಾ**

ಜನಸಂಖ್ಯೆ ಹೆಚ್ಚಳಕ್ಕೆ ಕಾರಣ–ಪರಿಹಾರ